# ಬಿ.ಪ್ಯಾಕ್ ಸಂಸ್ಥೆ ಬೆಂಗಳೂರು ನಗರ 27 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳ ಕುರಿತು ವಿಶೇಷ ವರದಿಯನ್ನು ಬಿಡುಗಡೆ ಮಾಡಲಾಯಿತು

ಬೆಂಗಳೂರು, 3 ಮೇ, 2023:

ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿಯು (B.PAC) ಬೆಂಗಳೂರಿನ 27 ವಿಧಾನಸಭಾ ನಗರ ಕ್ಷೇತ್ರಗಳನ್ನು ಕೇಂದ್ರೀಕರಿಸಿ ವಿಸ್ತೃತ ಅಧ್ಯಯನವನ್ನು ಕೈಗೊಂಡಿದೆ ಮತ್ತು ಇಂದು 2023ರ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ 115 (378 ರಲ್ಲಿ) ಅಭ್ಯರ್ಥಿಗಳ ವಿವರಗಳೊಂದಿಗೆ "ನಿಮ್ಮ ಅಭ್ಯರ್ಥಿಗಳನ್ನು ತಿಳಿಯಿರಿ" ಅಭಿಯಾನವನ್ನು ಪ್ರಾರಂಭಿಸಲಾಯಿತು. ಈ ಉಪಕ್ರಮದ ಅಡಿಯಲ್ಲಿ, ಬಿ.ಪ್ಯಾಕ್, ದಕ್ಷ್ ಸಂಸ್ಥೆಯ ಸಹಯೋಗದೊಂದಿಗೆ ಅಭ್ಯರ್ಥಿಗಳ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳ ಬಗ್ಗೆ ನಿರ್ದಿಷ್ಟ ಅಧ್ಯಯನವನ್ನು ನಡೆಸಿದೆ ಮತ್ತು ದಾಖಲಾಗಿರುವ ಕ್ರಿಮಿನಲ್ ದೂರುಗಳ ಕುರಿತು ವಿಶೇಷ ವರದಿಯನ್ನು ಬಿಡುಗಡೆ ಮಾಡಿದೆ.

ಬೆಂಗಳೂರಿನಲ್ಲಿ ನಾಲ್ಕು ಪ್ರಮುಖ ರಾಜಕೀಯ ಪಕ್ಷಗಳು ಮತ್ತು ಕೆಲವು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ 115 ಅಭ್ಯರ್ಥಿಗಳ ಸ್ವಯಂ ಪ್ರಮಾಣ ಪತ್ರಗಳನ್ನು ವಿಶ್ಲೇಷಿಸಿ ದಕ್ಷ್ ಅವರು ಅಪರಾಧ ಪ್ರಕರಣಗಳ ವಿಶೇಷ ವರದಿಯನ್ನು ಸಿದ್ಧಪಡಿಸಿದ್ದಾರೆ. ಅಫಿಡವಿಟ್‌ಗಳು ಚುನಾವಣಾ ಆಯೋಗದ ವೆಬ್‌ಸೈಟ್‌ಗಳಲ್ಲಿ ಲಭ್ಯವಿದ್ದು ಪ್ರಕರಣಗಳ ಸ್ವರೂಪ ಮತ್ತು ಪ್ರತಿ ಅಭ್ಯರ್ಥಿಯ ವಿರುದ್ಧದ ಪ್ರಕರಣಗಳ ಸಂಖ್ಯೆಯನ್ನು ಅರ್ಥಮಾಡಿಕೊಳ್ಳಲು ವಿವರವಾದ ವಿಶ್ಲೇಷಣೆಯನ್ನು ನಡೆಸಲಾಗಿದೆ. ಮತದಾರರಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಬಗ್ಗೆ ತಿಳುವಳಿಕೆ ಮೂಡಿಸಲು, ಅಫಿಡವಿಟ್‌ಗಳಲ್ಲಿ ಘೋಷಿಸಲಾದ ಪ್ರಕರಣಗಳ ಸ್ವರೂಪ ಮತ್ತು ತೀವ್ರತೆಯನ್ನು ಸಾರ್ವಜನಿಕರಿಗೆ ಅರ್ಥಮಾಡಿಕೊಳ್ಳಲು ಸಹಾಯ ಮಾಡಲು ಈ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ.

ನಾವು ವಿಶ್ಲೇಷಿಸಿದ 115 ಅಭ್ಯರ್ಥಿಗಳಲ್ಲಿ 38 ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ದೂರುಗಳನ್ನು ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ. ಅವುಗಳಲ್ಲಿ ಕೆಲವು ಪ್ರಕರಣಗಳು ತನಿಖೆಯ ಹಂತದಲಿದ್ದು, ಹೆಚ್ಚಿನವು ನ್ಯಾಯಾಲಯದ ಹಂತದಲ್ಲಿದೆ.

| **ಒಟ್ಟು ಪ್ರಕರಣಗಳ ಸಂಖ್ಯೆ** | 1 | 2 | 3 | 4 | 5 | 6 | 17 |
|---|---|---|---|---|---|---|---|
| **ಒಟ್ಟು ಅಭ್ಯರ್ಥಿಗಳು** | 14 | 4 | 6 | 8 | 3 | 2 | 1 |

<u>ರಾಜಕೀಯ ಪಕ್ಷಗಳು</u>

| **ಪಕ್ಷಗಳು** | **ಆಪ್** | **ಬಿ ಜೆ ಪಿ** | **ಐ ಎನ್ ಸಿ** | **ಜೆ ಡಿ (ಎಸ್)** | **ಕೆ ಆರ್ ಎಸ್** | **ನವ ಭಾರತ ಸೇನೆ** |
|---|---|---|---|---|---|---|
| **ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಒಟ್ಟು ಅಭ್ಯರ್ಥಿಗಳು** | 9 | 11 | 10 | 5 | 2 | 1 |

ಪ್ರಕರಣಗಳ ವಿಧ

| ಪ್ರಕರಣಗಳ ವಿಧ | ಈ ಪ್ರಕರಣಗಳನ್ನು ಹೊಂದಿರುವ ಒಟ್ಟು ಅಭ್ಯರ್ಥಿಗಳು |
|---|---|
| ಕೊಲೆಗೆ ಪ್ರಯತ್ನ | 1 |
| ವಂಚನೆ | 10 |
| ಭ್ರಷ್ಟಾಚಾರ | 5 |
| ರೋಗ/ಸಾಂಕ್ರಾಮಿಕ ಸಂಬಂಧಿತ | 9 |
| ಚುನಾವಣಾ ಅಪರಾಧಗಳು | 5 |
| ಭೂ ವಿವಾದ | 3 |
| ಹಣ ವರ್ಗಾವಣೆ | 2 |
| ಕೊಲೆ ಅಥವಾ ನಿರ್ಲಕ್ಷ್ಯದಿಂದ ಸಾವು | 3 |
| ಗಲಭೆ | 7 |
| ಎಸ್ ಸಿ/ಎಸ್ ಟಿ ದೌರ್ಜನ್ಯ ಕಾಯ್ದೆ | 1 |
| ಕಾನೂನುಬಾಹಿರ ಸಭೆ | 17 |

38 ರಲ್ಲಿ 2 ಮಹಿಳಾ ಅಭ್ಯರ್ಥಿಗಳು ಮತ್ತು 36 ಪುರುಷರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

**ಶಿಕ್ಷಣ ಮತ್ತು ಲಿಂಗ**

| ಶೈಕ್ಷಣಿಕ ವಿದ್ಯಾರ್ಹತೆ | ಅಭ್ಯರ್ಥಿಗಳ ಸಂಖ್ಯೆ |
|---|---|
| ಸ್ನಾತಕೋತ್ತರ ಪದವೀಧರರು | 3 |
| ಪದವಿಧರರು | 21 |
| ಪಿಯುಸಿ | 2 |
| ಎಸ್ ಎಸ್ ಎಲ್ ಸಿ | 8 |
| ಎಸ್ ಎಸ್ ಎಲ್ ಸಿ ಗಿಂತ ಕಡಿಮೆ | 3 |
| ಡಿಪ್ಲೋಮಾ | 1 |

**Revathy Ashok**, CEO, B.PAC said “We want to bring greater awareness with citizens about the criminal cases against the contesting candidates. This exercise is primarily aimed at educating the voter about the criminal antecedents of each candidate and we have also gone deeper to show what type of cases have been filed so citizens can make intelligent choices about the seriousness of the cases even though not convicted. We hope that citizens, using the power of their ballot ensure that no politician with any serious criminal background gets elected “

**Leah Verghese,** Research Manager, DAKSH said “While it is mandatory for candidates to declare their criminal cases, the way these cases are declared and the format of the affidavits make it difficult for us to analyze them effectively. One of the major challenges we face is that the police stations and courts where the cases are filed are not always clearly mentioned in the affidavits. This makes it challenging to track these cases on the eCourts portal, which is the official website for accessing court data in India. Additionally, the affidavits are often converted into images and uploaded on the Election Commission of India's website, making it difficult to extract the relevant information as the affidavits are not machine-readable. We urge the authorities to take steps to ensure that the information is presented in a more accessible format so that citizens can make informed decisions during the election process.”

Link to all the 27 Bengaluru Urban Assembly Constituencies candidates’ details - https://bpac.in/election-habba-2023/know-your-candidates/
Link for the Criminal Cases Analysis Report